ಇರಬಹುದು ಎಂಬ ಭ್ರಮೆಯಾದರೂ ಇರದಿದ್ದರೆ ಬರೆಯಲು ಉತ್ಸಾಹವಾದರೂ ಎಲ್ಲಿಂದ ಬರುತ್ತದೆ! ಪ್ರಾತಿನಿಧಿಕ ಕನ್ನಡ ಕತೆಗಳ ಆ್ಯಂಥಾಲಜಿಯಲ್ಲಿ ನನ್ನ ಕತೆಯನ್ನೂ ಸಂಪಾದಕರು ಸೇರಿಸಿದಾಗ ಒಂಚೂರು ಆತ್ಮವಿಶ್ವಾಸ ಚಿಗುರುತ್ತದೆ. ಆದರೂ, ಕಾಲಾನಂತರ ಯಾವುದು ಒಳ್ಳೆಯ ಕತೆ, ಯಾವುದು ಅಲ್ಲ ಎಂಬ ಬಗ್ಗೆ ಯಾವ ಬಗೆಯ ಮಾನದಂಡಗಳು ಸೃಷ್ಟಿಯಾಗುತ್ತವೋ ಬಲ್ಲವರಾರು! ಆದಷ್ಟೂ ಪ್ರಾಮಾಣಿಕವಾಗಿ ಭಾಷೆಯನ್ನು ಬಳಸಿ ನಾವು ಕಂಡ ಸತ್ಯಗಳನ್ನು ಮಂಡಿಸುವುದು ಮುಖ್ಯ ಎಂದು ನನಗನ್ನಿಸಿದೆ. ಒಂದು ಕಾಲದಲ್ಲಿ ತಾನು ಕಂಡ ಗಾಢ ಸತ್ಯಗಳು ಎಲ್ಲ ಕಾಲದಲ್ಲೂ ಕೆಲವರಿಗಾದರೂ ತಲುಪಬಲ್ಲವು ಎಂಬ ವಿಶ್ವಾಸ ಬರವಣಿಗೆಯಲ್ಲಿ ತೊಡಗಿರುವವರಿಗೆ ಇರಲೇಬೇಕಾಗುತ್ತದೆ; ಇಲ್ಲದಿದ್ದರೆ ಬರೆಯಲು ಕಾರಣವೇ ಇರುವುದಿಲ್ಲ.

**● ಈ ಕಾಲದಲ್ಲಿ ಪ್ರಾದೇಶಿಕತೆ, ಕುಟುಂಬದ ವಿವರಗಳು, ಕುಟುಂಬಗಳ ಚಿತ್ರಣದಲ್ಲಿ ನರಳುತ್ತಿರುವ ಕನ್ನಡದ ಕತೆಗಳು ಭಿನ್ನ ಅನುಭವ, ವಸ್ತು, ನಿರ್ವಹಣೆಗಾಗಿ ಪ್ರಯತ್ನಿಸುತ್ತಿಲ್ಲ ಎಂಬುದು ನಿಜವೆ?**

ಕಳೆದ ಕೆಲವು ವರ್ಷಗಳಲ್ಲಿ ಗೆಳೆಯರು, ಪರಿಚಿತರು ಓದಲೇಬೇಕೆಂದು ಹೇಳಿದ ಕತೆಗಳನ್ನು, ಕಥಾಸಂಕಲನಗಳನ್ನು ಬಿಟ್ಟರೆ, ಈಚಿನ ಕತೆಗಳನ್ನು ನಾನು ಹೆಚ್ಚು ಓದಿಲ್ಲ. ಅದಕ್ಕೆ ಸಮಯದ ಅಭಾವವೂ ಕಾರಣವಿರಬಹುದು. ಆದರೂ ಕೆಲವೊಮ್ಮೆ ಕಥಾಸ್ಪರ್ಧೆಗಳ ತೀರ್ಪು ಕೊಡಲು ಹೊಸ ಕತೆಗಳನ್ನು ಓದುವಾಗ, ಈ ಕತೆಗಾರರು ಕೊನೆಯ ಪಕ್ಷ ನೂರು ವರ್ಷಗಳ ಸಮೃದ್ಧ ಆಧುನಿಕ ಕನ್ನಡ ಕಥಾಪರಂಪರೆಯ ಒಂದು ನೂರು ಮುಖ್ಯ ಕತೆಗಳನ್ನಾದರೂ ಓದಿರುವ ಯಾವ ಕುರುಹೂ ಇಲ್ಲಿ ಕಾಣುವುದಿಲ್ಲವಲ್ಲ ಎನ್ನಿಸುತ್ತದೆ. ಒಂದು ಕತೆಯಲ್ಲಿ ಪ್ರಾದೇಶಿಕವಿರಲಿ, ಕುಟುಂಬಲೋಕವಿರಲಿ, ಅಥವಾ ವ್ಯಕ್ತಿಯೊಬ್ಬನ ಲೋಕವಿರಲಿ... ಅವನ್ನೆಲ್ಲ ನಿರ್ವಹಿಸುವ ಕಲಾತ್ಮಕ ಶ್ರಮ, ಭಾಷಿಕ ಶಕ್ತಿ ಹಾಗೂ ಸತ್ಯಶೋಧನೆಯ ಬದ್ಧತೆಯಿಲ್ಲದಿದ್ದರೆ ಅದು ಒಳ್ಳೆಯ ಕತೆಯಾಗುವುದಿಲ್ಲ. ಲಂಕೇಶರ 'ಸಹಪಾಠಿ', ತೇಜಸ್ವಿಯವರ 'ನಿಗೂಢ ಮನುಷ್ಯರು', ಅನಂತಮೂರ್ತಿಯವರ 'ಸೂರ್ಯನ ಕುದುರೆ', ದೇವನೂರ ಮಹಾದೇವರ 'ಒಡಲಾಳ' ಥರದಲ್ಲಿ ಒಮ್ಮೆ ಓದಿ ಮತ್ತೆ ಅವಕ್ಕೆ ವಾಪಸಾಗಿ ಓದಿದಂಥ ಸಂಕೀರ್ಣ ಕತೆಗಳನ್ನು, ಮರು ಓದಿನಲ್ಲಿ ಹೊಸ ಅರ್ಥಗಳನ್ನು ಹೊರಡಿಸುವ ಕತೆಗಳನ್ನು ಕನ್ನಡದಲ್ಲಿ ಇತ್ತೀಚೆಗೆ ನಾನು ಓದಿಲ್ಲ. ಅದು ನನ್ನ ಓದಿನ ಮಿತಿಯೂ ಇರಬಹುದು...

**● ನಿಮ್ಮ ಕತೆಗಳ ಬಗ್ಗೆ ಇಲ್ಲಿಯ ತನಕ ಬಂದ ಅತ್ಯುತ್ತಮ ವ್ಯಾಖ್ಯಾನ, ಪ್ರತಿಕ್ರಿಯೆ ಏನಿತ್ತು? ಅದು ಯಾರದಾಗಿತ್ತು?**

ಒಂದೇ ಎರಡೇ! ನನ್ನ ಅನೇಕ ಗೆಳೆಯ, ಗೆಳತಿಯರು ಯಾವ ಸ್ವಾರ್ಥವೂ ಇಲ್ಲದೆ, ನಿಷ್ಠುರವಾಗಿ, ವಸ್ತುನಿಷ್ಠವಾಗಿ, ಉತ್ಸಾಹದಿಂದ ನನ್ನ ಕತೆಗಳ ಒಳ್ಳೆಯ ಹಾಗೂ ತೀಕ್ಷ್ಣ ವ್ಯಾಖ್ಯಾನಗಳನ್ನು ಕೊಟ್ಟಿದ್ದಾರೆ. ಗೆಳೆಯ, ಕತೆಗಾರ ಎಸ್. ಗಂಗಾಧರಯ್ಯ ನನ್ನ ಮೂರು ದಶಕಗಳ ಕತೆಗಳಿಗೆ ಬರೆದ ಪತ್ರರೂಪದ ಮುನ್ನುಡಿ ನನಗೆ ಅಪಾರ ಆತ್ಮವಿಶ್ವಾಸವನ್ನು ತಂದಿದೆ. ಅನೇಕರು ನನ್ನ ಕತೆಗಳ ದೋಷಗಳು, ಶಕ್ತಿಗಳು, ಅರ್ಥಗಳು ಎಲ್ಲದರ ಕುರಿತೂ ಹೇಳಿದ್ದಾರೆ. ಅವೆಲ್ಲದರಿಂದ ನನಗೆ ಉಪಯೋಗವಾಗಿದೆ. ಆದರೆ ಓದುಗರು ನನ್ನ ಕತೆಯ ಮಿತಿಗಳನ್ನು ಹೇಳುವಷ್ಟರಲ್ಲಿ ಬರವಣಿಗೆ ಮುಗಿದೇ ಹೋಗಿರುತ್ತದೆ... ಅದೇ ವಿಪರ್ಯಾಸ! ಆದರೂ ಅವೆಲ್ಲ ನನ್ನ ಮುಂದಿನ ಬರವಣಿಗೆಗೆ ನೆರವಾಗಬಹುದು. ಇದೆಲ್ಲದರ ನಡುವೆ, ನನ್ನ ಕತೆಗಳನ್ನು ನಾಟಕ, ಸಿನಿಮಾ ಮಾಡುತ್ತೇವೆಂದು